




ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು ಎಂಬ ಕುವೆಂಪುರವರ ಕವಿವಾಣಿಯಿಂದಲೇ ಈ ಕವಿಯ ಪರಿಚಯವಾಗುವುದು ಮೇಲು. ಅವನು ಬರೆದ ಕಾವ್ಯ 'ಕರ್ನಾಟಕ ಭಾರತ ಕಥಾಮಂಜರಿ'. 'ಕುಮಾರವ್ಯಾಸ ಭಾರತ'ವೆಂಬ ಹೆಸರೂ ಅದಕ್ಕೆ ಇದೆ. ಹದಿನೈದನೆಯ ಶತಮಾನದ ಪೂರ್ವಾರ್ಧದಲ್ಲಿ ಗದುಗಿನಲ್ಲಿ ನೆಲೆಸಿದ್ದ ಈ ಕವಿಗೆ ಆ ಊರಿನ ದೇವರಾದ ವೀರನಾರಾಯಣನೇ ಆರಾಧ್ಯ ದೈವ. ಈತನ ನಿಜವಾದ ಹೆಸರು ನಾರಣಪ್ಪ. ಗದುಗಿನ ಹತ್ತಿರವಿರುವ ಕೋಳಿವಾಡದಲ್ಲಿನ ಶಾನುಭೋಗರ ಸತ್ಕುಲದ ಸಂಸ್ಕಾರ. ವೃತ್ತಿಯಿಂದ ಕರಣಿಕನಾಗಿದ್ದ ಈತನಿಗೆ ತನ್ನ ದೇವರನ್ನು ಕುರಿತು ಗ್ರಂಥವೊಂದನ್ನು ರಚಿಸುವ ತವಕ. ಅತಿಶಯವಾದ ದೈವಭಕ್ತಿಯ ಹಾಗೂ ಆತ್ಮವಿಶ್ವಾಸದ ಕೆಚ್ಚಿನ ಪರಿಣಾಮವೋ ಏನೋ ಯಾವ ರಾಜನಲ್ಲಾಗಲಿ, ಶ್ರೀಮಂತನಲ್ಲಾಗಲಿ ಅವನು ಆಶ್ರಯವನ್ನು ಪಡೆದಂತೆ ಅಥವಾ ಕೋರಿದಂತೆ ತೋರುವುದಿಲ್ಲ.

ಬದುಕಿನ ಬಗೆಗೆ ಈ ಭಕ್ತಕವಿಯ ಮನೋಧರ್ಮವನ್ನರಿಯಲು ಈತನು ರಚಿಸಿದ ಭಾರತಕ್ಕಿಂತಲೂ ಉತ್ತಮವಾದ ಆಕರ ಬೇರೊಂದಿಲ್ಲ. ಕನ್ನಡ ಸಾಹಿತ್ಯದಲ್ಲಿ ಭಾಗವತ ಪ್ರಜ್ಞೆಯ ಕಾವ್ಯ ರಚನೆಗೆ ಕುಮಾರವ್ಯಾಸನೇ ಮೊದಲಿಗ. ಭಗವತ್ ಪಾರಮ್ಯವನ್ನು ಚಿತ್ರಿಸಲು ತಾನು ಮಹಾಭಾರತದ ರಚನೆಯನ್ನು ಕೈಗೊಂಡ ವಿಷಯವನ್ನು ತಿಳಿಸುತ್ತಾ

ತಿಳಿಯ ಹೇಳುವೆ ಕೃಷ್ಣ ಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ ॥

ಮಹಾಭಾರತದ ಕೇಂದ್ರಸ್ಥಾನದಲ್ಲಿ ಶ್ರೀಕೃಷ್ಣನನ್ನು ಕುಮಾರವ್ಯಾಸ ಇರಿಸಿರುವುದು ತನ್ನ ದೈವಭಕ್ತಿಯ ಕಾರಣದಿಂದಲೇ ಅಲ್ಲ, ಕಥಾವಸ್ತುವಿನ ಸಂವಿಧಾನದಿಂದಲೂ ಅದೇ ನ್ಯಾಯವಾದುದು ಎಂಬುದನ್ನು ಈ ಕಾವ್ಯದ ಉದ್ದಕ್ಕೂ ಸಮರ್ಥಿಸಿದ್ದಾನೆ. ಕುಮಾರವ್ಯಾಸನ ಶ್ರೀಕೃಷ್ಣ ಎಂಥವನು? ವಿಶ್ವವನ್ನೆಲ್ಲ ಓತಪ್ರೋತವಾಗಿ ವ್ಯಾಪಿಸಿರುವ ಚೈತನ್ಯಮಯವಾದ ಪರತತ್ತ್ವದ ಸಾಕಾರಮೂರ್ತಿ. ಧ್ಯಾನಗೋಚರನಾದ ಆ ಪರಂಜ್ಯೋತಿಯ ಅನಂತರೂಪಗಳ ಮಹಿಮೆಯನ್ನು ಎಷ್ಟು ಕೊಂಡಾಡಿದರೂ ಕುಮಾರವ್ಯಾಸನಿಗೆ ತೃಪ್ತಿಯಿಲ್ಲ.

ವಿಶ್ವಶಿಲ್ಪದ ಕುಶಲ ಹಸ್ತನು । ವಿಶ್ವರಕ್ಷೆಯ ಮಂತ್ರವಾದಿಯು ।
ವಿಶ್ವಸಮಿಧೆಯೊಳಗ್ನಿಕಾರ್ಯದ ಬ್ರಹ್ಮಚಾರಿ ವಟು ॥
ವಿಶ್ವನಾಟಕ ಸೂತ್ರಧಾರನು । ವಿಶ್ವವಿಸ್ಮಯದೈಂದ್ರಜಾಲಿಕ ।
ವಿಶ್ವದಂತಸ್ಸ್ಯೂತ ಚೇತನನೀತ ನೋಡೆಂದ ॥

ಇಲ್ಲಿ ಸಹಜವಾಗಿ ಒಂದು ಪ್ರಶ್ನೆ ಏಳುತ್ತದೆ: ಹಾಗಾದರೆ ಕುಮಾರವ್ಯಾಸನ ಭಾರತ ಸಂಪೂರ್ಣವಾಗಿ ಪರಮಾತ್ಮ ಪಾರಾಯಣವೇ? ಪುರಾಣದ ಪುನರ್‌ಸೃಷ್ಟಿಯೇ? ಕುಮಾರವ್ಯಾಸನ ಕವಿತಾಪ್ರತಿಭೆ ಭಾರತವನ್ನು ಒಂದು ಭಾಗವತ ಕೃತಿಯಾಗಿ ಪರಿವರ್ತಿಸಿದೆಯೇ? ಹೇಳಿ ಕೇಳಿ ಮಹಾಭಾರತದ ಲೋಕ ನಿಷ್ಠುರವಾದ ಮನುಷ್ಯಲೋಕ. ಆಸೆ, ನಿರಾಸೆ, ಗೆಲುವು, ಗೋಳು, ಸಿಟ್ಟು, ಶಾಂತಿಗಳಿಂದ ತುಂಬಿದ ಅತ್ಯಂತ ಸಂಕೀರ್ಣವಾದ ಮನುಷ್ಯನ ಅನುಭವಪ್ರಪಂಚವನ್ನು ಒಳಗೊಂಡಿರುವ ಒಂದು ಮಹಾಗಾಥೆ. ಕೃಷ್ಣನ ಮಹಿಮಾದಿಗಳೇನೇ ಇರಲಿ, ಬಿಡಲಿ, ಮನುಷ್ಯಮಾತ್ರರಾದ ಪಾಂಡವ-ಕೌರವಾದಿಗಳು ತಮ್ಮ ತಮ್ಮ ಪ್ರಾಪಂಚಿಕ ಜೀವನವನ್ನು ತಳ್ಳಲೇಬೇಕು, ತಾಳಲೇಬೇಕು. ವ್ಯಾಮೋಹ-ದುರ್ಮೋಹ, ಅಲಕ್ಷ್ಯ-ಅಜ್ಞಾನ, ಅಸೂಯೆ-ಅಹಂಕಾರ, ದುಗುಡ-ದುಮ್ಮಾನಗಳ ಸುಳಿದಾಟ ತುಳಿದಾಟಗಳನ್ನು ತಪ್ಪಿಸಲು ಯಾರಿಗೆ ತಾನೇ ಸಾಧ್ಯ? ಜಗತ್ತಿನ ವ್ಯಾಪಾರಗಳಲ್ಲಿ ಅನಿವಾರ್ಯವಾಗಿ ಕಾಣುವ ಈ ಪ್ರವೃತ್ತಿಗಳು ಕುಮಾರವ್ಯಾಸನ ಪಾತ್ರಗಳಲ್ಲಿ ಸಹಜ ಶೋಭೆಯಿಂದ ಪ್ರಕಾಶಿಸುತ್ತವೆ. ವಿವಿಧ ಪ್ರವೃತ್ತಿಯ ವ್ಯಕ್ತಿಗಳಿಗೆ, ಅವರ ಕನಸುಗಳಿಗೆ ದಾರಿಬೆಳಕಾಗಬಲ್ಲ,

ಮಾನವ ಮಹತ್ವದ ಇತಿಹಾಸವನ್ನು ಬಿಂಬಿಸುವ ಕುಮಾರ ವ್ಯಾಸನ ತುಡಿತವನ್ನು ಕಾವ್ಯದ ಮೊದಲಲ್ಲೇ ಕಾಣಬಹುದು:

ಅರಸುಗಳಿಗಿದು ವೀರ । ದ್ವಿಜರಿಗೆ ಪರಮ ವೇದದ ಸಾರ ।
ಯೋಗೀಶ್ವರರ ತತ್ತ್ವವಿಚಾರ । ಮಂತ್ರಿಜನಕೆ ಬುದ್ಧಿಗುಣ....

ಪರಾಕ್ರಮದಿಂದ ಕಾದಾಡುವ ಬೀಭತ್ಸ ಕಾಳಗಗಳಿಂದ, ಹೃದಯವನ್ನು ನಡುಗಿಸುವ ದುರಂತಗಳಿಂದ ತುಂಬಿರುವ, ಕಡುಶೋಕದ ಕಣ್ಣೀರಿನ ಕಡಲಿನಂತಿರುವ ಮಹಾಭಾರತದಲ್ಲಿ ಮನುಷ್ಯನ ಸಹಜ ಸ್ವಭಾವ, ಅವನು ಅನುಸರಿಸುವ ವ್ಯಾವಹಾರಿಕ, ರಾಜಕೀಯ ನೀತಿ ಇವೆಲ್ಲವುಗಳ ಹಿನ್ನೆಲೆಯಲ್ಲಿ ಅಗತ್ಯವಾಗಿ ಇರಲೇಬೇಕಾದ ಮೌಲ್ಯಪ್ರಜ್ಞೆಯ ಆಳವಾದ ಮಥನ ನಡೆದಿದೆ. ಇಂತಹ ಮಹಾಭಾರತಕ್ಕೆ ಕುಮಾರವ್ಯಾಸನು ಶ್ರೀಕೃಷ್ಣನನ್ನೇ ಸೂತ್ರಧಾರನನ್ನಾಗಿ ಮಾಡಿರುವ ಔಚಿತ್ಯಪೂರ್ಣತೆ ಅತ್ಯಂತ ಸ್ವಾರಸ್ಯಕರವಾಗಿದೆ.

ಈ ಕಾವ್ಯದಲ್ಲಿನ ಶ್ರೀಕೃಷ್ಣ ತತ್ತ್ವವಾಗಿ ನಿರಾಸಕ್ತ, ಆದರೆ ವ್ಯಕ್ತಿಯಾಗಿ ಕಾರ್ಯಪ್ರವೃತ್ತ ಹಾಗೂ ನಿರ್ಲಿಪ್ತ. ನಶ್ವರವಾದ ನರದೇಹದಲ್ಲಿ ಶಾಶ್ವತವಾದ ಪರದೈವದ ಸಾಕಾರ ಮೂರ್ತಿಯೇ ಇವನು. ಇಂತಹ ಪರದೈವದ ಮೇಲಿನ ಭಕ್ತಿಪರಾಯಣತೆ ಸಾಮಾನ್ಯವಾಗಿ ಭಕ್ತನಲ್ಲಿ ವೈರಾಗ್ಯವನ್ನು ತೀವ್ರಗೊಳಿಸಿ ಸಂಸಾರದ ಜಂಜಾಟದಿಂದ ದೂರವಿರುವಂತೆ ಮಾಡುತ್ತದೆ. ಆದರೆ ಇಲ್ಲಿನ ಪಾತ್ರಗಳಿಗೆ ಶ್ರೀಕೃಷ್ಣನು ಪರಮಾತ್ಮನೆಂಬ ಅರಿವಿದ್ದರೂ, ಮಹತ್ತರವಾದ ಜೀವಿತಾಕಾಂಕ್ಷೆ ಇದೆ. ಜೀವನದ ಪ್ರಕ್ರಿಯೆಯಿಂದ ತಪ್ಪಿಸಿಕೊಂಡು ಹೋಗುವ ಗಡಿಬಿಡಿ ಏನೂ ಇಲ್ಲ. ಸುಖದುಃಖಗಳನ್ನು ಉತ್ಕಟವಾಗಿ ಅನುಭವಿಸಿ ಪ್ರಕಟಿಸುವ ಛಲ ಇದೆ. ಕೃಷ್ಣನ ಮಹಿಮಾಪೂರ್ಣವಾದ ಸಾನ್ನಿಧ್ಯದಲ್ಲಿಯೂ ಇಲ್ಲಿನ ವ್ಯಕ್ತಿಗಳು ತಮ್ಮ ಪ್ರವೃತ್ತಿಗಳಿಗೆ ತಕ್ಕಂತೆ, ಜೀವನಶಕ್ತಿಯನ್ನು ತಮ್ಮದೇ ಆದ ರೀತಿಯಲ್ಲಿ ಪ್ರಕಾಶಿಸುತ್ತಾರೆ. ಶ್ರೀಕೃಷ್ಣನಲ್ಲಿ ಅತಿಶಯವಾದ ಭಕ್ತಿಯನ್ನಿಟ್ಟಿರುವ ಪಾಂಡವರಿಗೆ ಋಜು ಮಾರ್ಗದಲ್ಲಿ ನಡೆದು ರಾಜ್ಯವನ್ನು ಗೆದ್ದು ಆಳಬೇಕೆಂಬ ಆಸೆ ಇದೆ. ಆಶ್ಚರ್ಯವೆಂದರೆ, ದುರ್ಮಾರ್ಗಿಯಾದ, ಕೃಷ್ಣನನ್ನು ದ್ವೇಷಿಸಿ ಕೆಣಕುವ ಕೌರವನಿಗೂ ಸಹ ಕೃಷ್ಣನ ಅಂತರ್ಯಾಮಿತ್ವದ ರಹಸ್ಯ ಗೊತ್ತಿದೆ. ಕೌರವನ ಈ ಆಂತರಿಕ ಪ್ರಜ್ಞೆಗೆ ದನಿ ಕೊಡುವ ಕುಮಾರವ್ಯಾಸನ ಕಲಾಕೌಶಲ ಅಪ್ರತಿಮವಾದುದು. ಶ್ರೀಕೃಷ್ಣನು ಸಂಧಾನಕ್ಕೆ ಬಂದ ಸನ್ನಿವೇಶ ಅದು.

ತಾತ ಹೆದರದಿರೀ ಮುಕುಂದನ । ಕೈತವಕೆ ಬೆಚ್ಚದಿರು
ಸಂಧಿಯ ।ಮಾತು ತಾನಿದು ಹೃದಯವೇ ಬೆಸಗೊಳ್ಳಿ ಮುರಹರನ।
ಈತನಂತರ್ಯಾಮಿ ಜೀವ । ವ್ರಾತದಲಿ ಜನಜನಿತವಿದು
ಜಗ । ವೀತನಾಜ್ಞೆಯೊಳೊಲೆವುದೆಂದನು ಕೌರವರರಾಯ ॥

ಸಂಗಿಯೆನಿಸನು ಜಗವ ಹುಟ್ಟಿಸಿ। ನುಂಗಿದೊಡೆ ನಿಷ್ಕರುಣಿಯೆನಿಸನು
ಅಂಗ ರಕ್ಷೆಯ ಮಾಡಿ ಮೋಹಿತನಲ್ಲ ಮೂಜಗಕೆ
ಜಂಗಮಸ್ಥಾವರಕೆ ಚೈತನ್ಯಾಂಗ ರಕ್ಷಕನು
ಘನಕೆ ಘನ ಅಣುವಿಂಗೆ ತಾನಣುವೆನಿಪ ಪರತರವಸ್ತು ನೋಡೀತ

... ಭಿನ್ನನಂತಿರೆ ತೋರಿ, ಭಿನ್ನಾಭಿನ್ನನೆನಿಸಿಯೆ ಮೆರೆವ
ತಿಳಿಯಲಭಿನ್ನನೈ ಮುರವೈರಿ ನಾವಿನ್ನಂಜಲೇಕೆಂದ
... ಕೊಲುವನನ್ಯರನನ್ಯರಿಂದವೆ
ಕೊಲಿಸುವನು ಕಮಲಾಕ್ಷನಲ್ಲದೆ
ಉಳಿದ ಜೀವವ್ರಾತಕೀ ಸ್ವಾತಂತ್ರ್ಯವಿಲ್ಲೆಂದ.

ಇಂತಹ ಅಂತರ್ಯಾಮಿ ವ್ಯಾವಹಾರಿಕ ಪ್ರಪಂಚದಲ್ಲಿ ವ್ಯಕ್ತಿ ಗುಣ, ಕಾರ್ಯದಕ್ಷತೆ, ಚಾರಿತ್ರ್ಯ, ಜ್ಞಾನ, ಪೌರುಷ, ಕ್ರಿಯಾಶಕ್ತಿಯೇ ಮೊದಲಾದ ಉತ್ಕೃಷ್ಟ ಗುಣಗಳಿಂದ ತನ್ನ ತೇಜಸ್ಸನ್ನು ಸೂಸುತ್ತಾ, 'ನೆನೆದವರಿಗೆ ತನ್ನನ್ನು ತೆತ್ತು ಬದುಕುವ' ವಾತ್ಸಲ್ಯದ ಸಾಕಾರ ಮೂರ್ತಿಯಾಗಿದ್ದಾನೆ. ಇಂತಹ ಶ್ರೀಕೃಷ್ಣನ ಪ್ರಭಾವಕ್ಕೆ ಒಳಗಾಗದವರು ಯಾರಿದ್ದಾರೆ? ಕುಮಾರವ್ಯಾಸ ಭಾರತದಲ್ಲಿ ಕೃಷ್ಣನ ಪ್ರಭಾವಕ್ಕೆ ಒಳಗಾಗದ ಪಾತ್ರವೇ ಇಲ್ಲ. ಆದರೆ ಕೃಷ್ಣನು ತಾನಾಗಿಯೇ ಯಾರ ಸ್ವಾತಂತ್ರ್ಯವನ್ನೂ ಅಪಹರಿಸುವುದಿಲ್ಲ.

ಸಾರಾಂಶವಿಷ್ಟೇ. ದೇವಮಾನವ ಸಂಬಂಧದ ರಹಸ್ಯವನ್ನು ಅರಿಯುವ ಒಂದು ತಾತ್ವಿಕ ಅನ್ವೇಷಣೆ ಈ ಕಾವ್ಯದ ಮೂಲ ಆಶಯವಾಗಿದೆ. ಐಹಿಕ ತಾಪತ್ರಯಗಳಿಂದ ಪೀಡಿತರಾದ ಸಾಮಾನ್ಯ ಮನುಷ್ಯರು ಮತ್ತು ಆ ಪರದೈವದ ಸಂಬಂಧದ ರಹಸ್ಯ ಕೃಷ್ಣನ ವ್ಯಕ್ತಿತ್ವದಲ್ಲಿ ಮೂರ್ತಿಮತ್ತಾಗಿದೆ. ಕುಮಾರವ್ಯಾಸನ ಕಾವ್ಯದಲ್ಲಿ ಭಕ್ತರು ಭಕ್ತರಲ್ಲದವರು ಒಂದು ವಾಸ್ತವ ಜಗತ್ತಿನಲ್ಲಿ ಜೀವಿಸುವವರು. ನೈತಿಕಪ್ರಜ್ಞೆಗೆ ಬದ್ಧರಾಗಿ ಅನೇಕ ನೋವನ್ನುಂಡು ಆತ್ಮಪರಿಪಾಕವನ್ನು ಸಾಧಿಸಿರುವ ಭಕ್ತರೂ ಇದ್ದಾರೆ. ನೈತಿಕತೆಯ ಗೊಡವೆಯೇ ಇಲ್ಲದೆ ಬದುಕಿಗಿಂತ ತಮ್ಮ ಅಹಂಕಾರವನ್ನೇ ದೊಡ್ಡದಾಗಿಸಿಕೊಂಡಿರುವ ಅಭಕ್ತರೂ ಇದ್ದಾರೆ. ಜಗತ್ತಿನ ಎಲ್ಲ ನಿಯಮಗಳು ಅವರಿಬ್ಬರಿಗೂ ಅನ್ವಯಿಸುತ್ತವೆ. ದೇವರು–ಭಕ್ತರ ಸಂಬಂಧ ಎಷ್ಟೇ ಗಾಢವಾಗಿದ್ದರೂ ಅದು ಮರ್ತ್ಯಲೋಕದ ನಿಯಮಗಳನ್ನು ಅತಿಕ್ರಮಿಸಿ ಹೋಗುವುದಿಲ್ಲ. ದೈವವು ಜೀವನಕ್ಕೆ ತೋರುವ ಈ ಗೌರವದಲ್ಲಿ ಬದುಕಿನ ಹಿರಿಮೆ ಇದೆ ಎಂಬುದನ್ನು ಕುಮಾರವ್ಯಾಸನು ತೋರಿಸಿದ್ದಾನೆ. ಮನುಕುಲದ ಇತಿಹಾಸ ಸಾಧಿಸಿ ತೋರಿಸಿರುವ ಅಂತಹ ಮರ್ತ್ಯಲೋಕದ ನಿಯಮ ವೊಂದು ಸಂಜಯನ ಭರತವಾಕ್ಯದಲ್ಲಿದೆ :

ಧರ್ಮವೆಲ್ಲಿಹುದಲ್ಲಿ ಜಯ, ಸತ್ಕರ್ಮವೆಲ್ಲಿಹುದಲ್ಲಿ ಸಿರಿ ।
ಸದ್ಧರ್ಮ ಸಂರಕ್ಷಕರು ಹರಿ ಧೂರ್ಜಟಿ ಪಿತಾಮಹರು ॥

ಕುಮಾರವ್ಯಾಸನು ತನ್ನ ಮಹಾಭಾರತವನ್ನು ದೈವಸನ್ನಿಧಿಯಲ್ಲಿ, ಭಕ್ತಿಯ ಆವೇಶದಿಂದ ಬರೆದಿದ್ದಾನೆಂಬ ಪ್ರತೀತಿ ಇದೆ. ಈಗಲೂ ಗದುಗಿನ ಗುಡಿಯ ಹಜಾರದಲ್ಲಿ ಒಂದು ಕಂಬದ ಮುಂದಣ ಜಾಗವು ನಾರಣಪ್ಪ ಕನ್ನಡ ಭಾರತವನ್ನು ಬರೆದ ಪವಿತ್ರ ಸ್ಥಳವೆಂದು ಖ್ಯಾತವಾಗಿದೆ. ವೀರನಾರಾಯಣನ ಏಕಾಂತ ಭಕ್ತನಾಗಿದ್ದ ಇವನು ಕರ್ನಾಟಕದ ಕವಿಸಾರ್ವಭೌಮ. ತನ್ನ ಉತ್ಕೃಷ್ಟ ಕಾವ್ಯರಚನೆಯ ಮೂಲಕ ಕನ್ನಡದ ವೈಶಿಷ್ಟ್ಯವನ್ನು ಮೆರೆದು ಕನ್ನಡ ಸಂಸ್ಕೃತಿಯ ಎತ್ತರ ಬಿತ್ತರಗಳನ್ನು ಗುರುತಿಸುವ ಸೀಮಾರೇಖೆಯಾಗಿದ್ದಾನೆ. ✪